**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.**

| | |
|---|---|
| ಒ ಎಸ್. ನಂ :- | 524/2018 |
| ಪಿ.ಡಬ್ಲ್ಯೂ | **1** |
| ದಿನಾಂಕ :- | **07.04.2025** |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2ನೇ ಪ್ರತಿವಾದಿ ಪರ ಶ್ರೀ ಎ ಜಿ ಆರ್ ವಕೀಲರಿಂದ**

ನಾನು ದ್ವಿತೀಯ ಪಿ ಯು ಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ, ಆದರೆ ಇಂಗ್ಲೀಷ್ ಬರುವುದಿಲ್ಲ. ಪ್ರತಿವಾದಿಯರು ಸರ್ಕಾರಿ ಓಣಿಯಲ್ಲಿ ಬರುತ್ತಿದ್ದ ನೀರು ಅಡ್ಡಗಟ್ಟಿದ ವಿಚಾರವಾಗಿ ಈ ಪ್ರಕರಣ ಮಾಡಿರುತ್ತೇನೆ. ನನ್ನ ತಾಯಿಗೆ 7 ಜನ ಮಕ್ಕಳು. ಅವರು 2019 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆಗೆ 3 ಜನ ಹೆಣ್ಣುಮಕ್ಕಳು ಹಾಗೂ 4 ಜನ ಗಂಡು ಮಕ್ಕಳು ಎಂದರೆ ಸರಿ. ನನ್ನ ತಂದೆಯನ್ನು ಚೇರ್ ಮನ್ ತಿಮ್ಮರಾಯಪ್ಪ ಎಂದು ಸಹ ಕರೆಯುತ್ತಾರೆ ಎಂದರೆ ಸರಿ. ನನ್ನ ತಂದೆ ಸುಮಾರು 40 ವರ್ಷ ಚೇರ್ ಮನ್ ಆಗಿ ಕರ್ತವ್ಯ ಮಾಡಿದ್ದರು ಎಂದರೆ ಸರಿ. ಎ ಶೆಡ್ಯೂಲ್ ನಲ್ಲಿ ಉತ್ತರಕ್ಕೆ ಸರ್ಕಾರಿ ಓಣಿ ಎಂದು ತೋರಿಸಿಲಾಗಿದೆ ಎಂದರೆ ಸರಿ. ಸರ್ವೆ ನಂ 77/2 ಕ್ಕೂ ಹಾಗೂ ನಮ್ಮ ಮನೆಗೂ 400 ಮೀ ದೂರ ಇದೆ. ನಮ್ಮ ಮನೆಯಿಂದ ಆ ಜಮೀನಿಗೆ ಓಣಿ ಮುಖಾಂತರ ಬರುತ್ತೇವೆ ಎಂದರೆ ಸರಿ. ಈಗಲೂ ಸಹ ಅದೇ ಓಣಿ ಮುಖಾಂತರ ಓಡಾಡುತ್ತಿದ್ದೇವೆ ಎಂದರೆ ಸರಿ. ಆ ಓಣಿಯ ದಾರಿಯ ಪಕ್ಕದಲ್ಲಿ ಅಂಬೇಡ್ಕರ್ ಭವನ ಹಾಗೂ ಶಾಲೆ ಇದೆ ಎಂದರೆ ಸರಿಯಲ್ಲ. ನಮ್ಮೂರಿನ ಸರ್ಕಾರಿ ಶಾಲೆಯಿಂದ ಎ ಶೆಡ್ಯೂಲ್ ಆಸ್ತಿಗೆ 150 ಮೀ ಆಗುತ್ತದೆ. ಆ ಶಾಲೆಯಲ್ಲಿ ಸುಮಾರು 40 ಜನ ಮಕ್ಕಳು ಇದ್ದಾರೆ. ಎ ಶೆಡ್ಯೂಲ್ ಆಸ್ತಿ ನನಗೆ ನಮ್ಮ ತಂದೆಯ ಕಡೆಯಿಂದ ಬಂದದಿರುತ್ತದೆ. ಎ ಶೆಡ್ಯೂಲ್ ಆಸ್ತಿಯಲ್ಲಿ 3-4 ಬೋರ್ ವೆಲ್ ಹಾಕಿರುತ್ತೇವೆ, ಅದರಲ್ಲಿ ಈಗ 1 ರಲ್ಲಿ ಮಾತ್ರ ಸುಮಾರು 1 ½ ಇಂಚು ನೀರು ಬರುತ್ತದೆ. ಎ ಶೆಡ್ಯೂಲ್ ಅಲ್ಲದೆ ಇತರ ಶೆಡ್ಯೂಲ್ ನಲ್ಲಿ ಸಹ ನಾವು ಸಾಗುವಳಿ ಮಾಡುತ್ತೀವಿ ಎಂದರೆ ಸರಿ. ಈಗ ನಾವು ಈ ಆಸ್ತಿಯಲ್ಲಿ ಬಾಳೆ ಬೆಳೆಯುತ್ತೇವೆ. ಎ ಶೆಡ್ಯೂಲ್ ಆಸ್ತಿಗೆ ಡ್ರಿಪ್ ಇರಿಗೇಷನ್ ಇದೆ. 2017-18 ರಲ್ಲಿ ನಾನು ಕೃಷಿ ಹೊಂಡ ಮಾಡಿಕೊಂಡಿರುತ್ತೇನೆ. ಆ ಕೃಷಿ ಮಾಡುವ ಮೊದಲು ನಿಯಮಗಳು ಪಾಲಿಸಿಲ್ಲ ಎಂದರೆ ಸರಿಯಲ್ಲ. ಆ ಕೃಷಿ ಹೊಂಡಕ್ಕೆ ಸುತ್ತು ಕಲ್ಲುಕೂಚ ಹಾಕಿಸಿರುತ್ತೇನೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳು ಕೊಟ್ಟಿರುತ್ತೇನೆ. ಆ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ವಾದ ಪತ್ರದ 8ನೇ ಖಂಡಿಕೆಯಲ್ಲಿರುವ ಕಾಣಿಸಿರುವ ಕೃಷಿ ಹೊಂಡದ ಪೂರ್ವಕ್ಕೆ ಪ್ರತಿವಾದಿಯರು ಮನೆ ಕಟ್ಟಿರುತ್ತಾರೆ ಎಂದರೆ ಸರಿ. ಅವರ ಮನೆಯ ಹಿಂದೆ ಆ ಕೃಷಿ ಹೊಂಡ ಇದೆ ಎಂದರೆ ಸರಿ. ಆ ಕೃಷಿ ಹೊಂಡಕ್ಕೂ ಹಾಗೂ ಪ್ರತಿವಾದಿಯರ ಮನೆಗೆ 5 ಅಡಿ ಅಂತರ ಇದೆ ಎಂದರೆ ಸಾಕ್ಷಿ ಸುಮಾರು 20 ಅಡಿ ಇದೆ ಎಂದು ನುಡಿದಿರುತ್ತಾರೆ. ಆ ರೀತಿ 20 ಅಡಿ ಅಂತರ ಇಲ್ಲದೆ ಇದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕೃಷಿ ಹೊಂಡದ ಉತ್ತರಕ್ಕೆ ಇರುವ ದಾರಿಯಲ್ಲಿ ನಾನು ಹಾಗೂ ಇತರ ಸಾರ್ವಜನಿಕರು ಈಗಲೂ ಸಹ ಓಡಾಡುತ್ತೇವೆ ಎಂದರೆ ಸರಿ. ಈಗ ಸದರಿ ದಾರಿಯಲ್ಲಿ ಮಳೆ ನೀರು, ಊರಿನ ಚರಂಡಿ ನೀರು ಬಂದು ಓಣಿ ಆಗಿದೆ ಎಂದರೆ ಸರಿ. ನಾನು ಆ ಊರಿನ ಚರಂಡಿ ನೀರು ಹಾಗೂ ಮಳೆ ನೀರು ಕೃಷಿ ಹೊಂಡಕ್ಕೆ ಬರುವಂತೆ ಮಾಡಿಕೊಂಡಿದ್ದೇನೆ

ಎಂದರೆ ಸರಿ. ಆ ನೀರು ನಾನು ತೋಟಕ್ಕೆ ಉಪಯೋಗಿಸಿಕೊಳ್ಳುತ್ತಿದ್ದೆ ಎಂದರೆ ಸರಿ. ನಾನು ಚರಂಡಿ ನೀರು ಕೃಷಿ ಹೊಂಡಕ್ಕೆ ಬರುವಂತೆ ಮಾಡಿಕೊಂಡ ಕಾರಣ, ಪ್ರತಿವಾದಿಯರಿಗೆ ಮನೆಯಲ್ಲಿ ವಾಸಕ್ಕೆ ತೊಂದರೆ ಆಗಿದ್ದು, ಆಗ ಪ್ರತಿವಾದಿಯರು ಹಾಗೂ ಊರಿನ ಗ್ರಾಮಸ್ಥರು ಸಂಬಂಧಪಟ್ಟ ಅಧಿಕಾರಿಗೆ ದೂರು ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಮೂರು ಛಾಯಾಚಿತ್ರಗಳನ್ನು ತೋರಿಸಿ, ಅದರಲ್ಲಿ ಕಂಡುಬರುವ ದಾರಿ ದಾವಾ ಎ ಶೆಡ್ಯೂಲ್ ನ ಉತ್ತರದಲ್ಲಿ ಇರುವ ಓಣಿ ಎಂದರೆ ಸರಿ ಎಂದು ಒಪ್ಪಿದ್ದರಿಂದ ಸದರಿ ಮೂರು ಛಾಯಾಚಿತ್ರಗಳನ್ನು ನಿಡಿ 1 ರಿಂದ 3 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಛಾಯಾಚಿತ್ರ ತೋರಿಸಿ ಅದರಲ್ಲಿ ಕಂಡುಬರುವ ಕೃಷಿ ಹೊಂಡ ನೋಡಿ ಅದು ನಮ್ಮ ಜಮೀನಿನಲ್ಲಿ ಇರುವುದು ಎಂದು ಒಪ್ಪಿದ್ದರಿಂದ ಅದನ್ನು ನಿಡಿ 4 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಛಾಯಾಚಿತ್ರ ತೋರಿಸಿ ಅದರಲ್ಲಿ ಕಾಣುವ ಮನೆಗಳು ಪ್ರತಿವಾದಿಯರದ್ದು ಎಂದು ಒಪ್ಪಿದ್ದರಿಂದ, ಸದರಿ ಛಾಯಾಚಿತ್ರವನ್ನು ನಿಡಿ 5 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು, ಆನೇಕಲ್.**